ಶಿವಮೊಗ್ಗಾ ಡಿಸ್ಟ್ರಿಕ್ಟ್.

ತಾರೀಖು 31ನೇ ಡಿಸಂಬರ್ 1889.

ಇದರಿಂದ ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದಿರುವ ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲಿ ಜೇವಾರಸಾಗಿರುವ ದಸ್ತಾವೇಜುಗಳನ್ನು ಹಾಜರು ಮಾಡಿದವರೇ ಆಗಲಿ ಅಥವಾ ಅವರ ಕಡೆ ಕ್ರಮವಾದ ಮುಖ್ತಾರೀಕರೇ ಆಗಲಿ ಈ ನೋಟಿಫಿಕೇಷನ್ ತಾರೀಖು ಲಾಗಾಯತು ಒಂದು ತಿಂಗಳ ಒಳಗಾಗಿ ಆಯಾ ಸಬ್ ರಿಜಿಸ್ಟ್ರಾರ್ ಮುಂದೆ ಹಾಜರಾಗಿ ವಾಪಸ್ ಪಡಿಯಬೇಕು, ಇಲ್ಲವಾದರೆ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲಾಗುತ್ತದೆ.

ದಸ್ತಾವೇಜಿನ ನಂಬರು.	ಆಫೀಸುಗಳು.	ದಸ್ತಾವೇಜನ್ನು ಬರಸಿಕೊಂಡವನ ಹೆಸರು ಮತ್ತು ಅಡ್ಡ ಹೆಸರು.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ಅಡ್ಡ ಹೆಸರು ವಗೈರೆ.	ದಸ್ತಾವೇಜಿನ ಖಾರೀ ತಾರೀಖು.	ದಸ್ತಾವೇಜು ರಿಜಿಸ್ಟರ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ಬುಕ್ಕು ನಂ. 1 133 1887—88	ಶಿವಮೊಗ್ಗಾ ಸಬ್ ರಿಜಿಸ್ಟ್ರಾರ್	1 ಹರಿಗೇಗ್ರಾಮದಲ್ಲಿರುವ ತಳವಾರ ಮಲ್ಲ 2 ಸಂಣಿಬೈ ಮರಿಯು 3 ಕರೆ ಚುಂಚೆ	ಶಿವಮೊಗ್ಗೆಯಲ್ಲಿರುವ ಬಾ ಟ್ಟೆ ಗೋಪಾಲರಾವ್	19—12—87	22—12—87	ಸರ್ವೆ ನಂ. 39ನೇ ತರೀ ಜಮೀನ್ ಎಕರೆ 5 ಆಕಾರ ರೂ. 18—0—0 ಪುಳ್ಳ ಜಮೀನ್ 340 ರೂಪಾಯಿಗೆ ಭೋಗ್ಯ ಆದದ್ದು
ಡಿಟೋ 82 1887—88	ಶಿವಮೊಗ್ಗಾ ಸಬ್ ರಿಜಿಸ್ಟ್ರಾರ್	ಇಸಲಾಪುರ ಗ್ರಾಮದಲ್ಲಿರುವ 1 ಭೀಮ 2 ಹೊಂನೂರ 3 ರಾಯಪ್ಪ	ಶಿವಮೊಗ್ಗಾದಲ್ಲಿರುವ ತಿರುಪಳ್ಳಯ್ಯನ ಅಡವೆಪ್ಪ	15—5—87	12—9—87	ಹೊನ್ನೂರಿನ ಖಾತೆ ಸರ್ವೆ ನ 9ನೇ ತರಿ ಎಕರೆ 10 ಗುಂಟೆ 29 ಆಕಾರ ರೂಪಾಯಿ 29—12—0 ರೂಪಾಯಿ ಜಮೀನ್ 150 ರೂಪಾಯಿಗೆ ಕೊಂಡದ್ದು
ಡಿಟೋ 128 1887—88	ಶಿವಮೊಗ್ಗಾ ಸಬ್ ರಿಜಿಸ್ಟ್ರಾರ್	ಹರಿಗೇ ಗ್ರಾಮದಲ್ಲಿರುವ ತಿಪ್ಪಣ್ಣ	ಶಿವಮೊಗ್ಗೆಯಲ್ಲಿರುವ ಹೊಳಕ್ಲು ಶ್ರೀನಿವಾಸ ತಾತಾಚಾರ್ರು	10—12—87	13—12—87	ಹರಿಗೇಗ್ರಾಮದಲ್ಲಿರುವ ತೆಂಗಿನತೋಲೆ ಹಾಕಿದ ಮನೆ ಮತ್ತು ತುರಿಮಣಿ ಭೀಮಂಣನವರ ಗದ್ದೆಯಲ್ಲಿ ಗುಣಿದೆರಿಗೆಗೆ ಹಾಕಿರುವ 3500 ಕಬ್ಬು ಸಹ 100 ರೂಪಾಯಿಗೆ ಕ್ರಯ
ಡಿಟೋ 66 86—87	ಶಿವಮೊಗ್ಗಾ ಸಬ್ ರಿಜಿಸ್ಟ್ರಾರ್	ಕಳೂರು ವಾಸಸ್ಥ ಬೈದೂರು ದಾಸಪ್ಪ	ತಳೂರು ಮಾಕಿ ಶಾಮಪ್ಪನವಗ ರಾವಪ್ಪ	23—11—86	24—11—86	ಕಳೂರು ಕಟ್ಟೆಯಲ್ಲಿರುವ 3 ಆಂಕಣ ಜಾಬಿನ ಸಂಪಾಗಿ ಹಾಕಿದ 9 ಆಂಕಣ ಮನೆ 130 ರೂಪಾಯಿಗೆ ಕ್ರಯ
ಡಿಟೋ 91 86—87	ಶಿವಮೊಗ್ಗಾ ಸಬ್ ರಿಜಿಸ್ಟ್ರಾರ್	ಕಳೂರು ಮಜರೆ ಬೆಳಗುಡ್ಡೆಯಲ್ಲಿರುವ ಭದ್ರಯ್ಯನ ತಮ್ಮನ ಹೆಂಡತಿ ಜೆನ್ನಮ್ಮ ಮತ್ತು ಪುಟ್ಟಯ್ಯನ ಮಗ ತಮ್ಮಂಣಯ್ಯ	ದುಮ್ಮದ ರುದ್ರಪ್ಪ ಮತ್ತು ಬಸಪ್ಪಗೌಡ	22—11—86	6—1—86	ಕಳೂರು ಗ್ರಾಮದಲ್ಲಿ ಜೆನ್ನಮ್ಮನ ಹೆಸರು ಖಾತೆ ಇರುವ ಸರ್ವೆ ನಂ. 77ನೇ ಪೈಕಿ ಮತ್ತು 78—82—85 87ನೇ ಜಮೀನ್ ಬೀಡುವಾಡಿ 999 ರೂಪಾಯಿಗೆ ಸಾಲ್ 1ಕ್ಕೆ 25 ರೂಪಾಯಿ ಪ್ರಕಾರ ಕಂತುನಿಂದ ಮೊಬಲಗು ತೀರಿಸುವದಾಗಿ ಪತ್ರ
2ನೇ ಬುಕ್ಕು ನಂ. 3 1886—87	ಶಿವಮೊಗ್ಗಾ ಸಬ್ ರಿಜಿಸ್ಟ್ರಾರ್	ರಿಂಡ್ ದೊಡ್ಡೂರು ಗ್ರಾಮದ ಹಸಲರಜಾತಿ ಹೆಬ್ಬಿಗುತ್ತಿಗನ ಮಗ ಚೆನ್ನಪ್ಪ	ಹೆಬ್ಬಿ ಕಾಳಿಂಗಯ್ಯ	15—8—86	8—12—86	ನಗದು 95 ರೂಪಾಯಿ ತೆಗದುಕೊಂಡು ಬಡ್ಡಿ ರೂಪಾಯಿ 4ಕ್ಕೆ ವರುಷ ಒಂದಕ್ಕೆ 0—12—0 ಮೇರಿಗೆ ಕೇರಿಸಿ ಈ ಬಗ್ಗೆ ನವುಕರಿ ಮಾಡುವದಾಗಿ ನವುಕರಿ ಕರಾರ್.
1ನೇ ಬುಕ್ಕು 90 86—87	ತೀರ್ಥಹಳ್ಳಿ	ಸುಬ್ಬಮ್ಮ ಕಟ್ಟೇ ಮರಿಯಾಚಾರ್ರ ಹೆಂಡತಿ ತೀರ್ಥಹಳ್ಳಿ ವಾಸಿ	ಭಂಡಾರದ ವೀರಬಸಯ್ಯ	4—4—86	7—7—86	ಮಧುವಂಪನಾಡ ಮಾಗಣಿ ಎಡೆಹಳ್ಳಿಗ್ರಾಮದಲ್ಲಿ ನಂಬರು 26ನೇ ಸರ್ವೆ ನಂಬರ್ 62 ಖುಷ್ಕಿ ಎಕರೆ 0 ಗುಂಟೆ 33 ಆಕಾರ 0, ತರಿ ಎಕರೆ 9 ಗುಂಟೆ 32 ಆಕಾರ 19 ವರುಷ ಒಂದಕ್ಕೆ 41ರೂಪಾಯಿ ಕೊಡುವ ಮೇರಿಗೆ ಮೂಲಗೇಣಿ ಕರಾರ್

ದಸ್ತಾವೇಜಿನ ನಂಬರು.	ಹೆಸರು.	ದಸ್ತಾವೇಜನ್ನು ಬರೆದು ಕೊಟ್ಟವರ ಹೆಸರು ಮತ್ತು ಅಡ್ಡ ಹೆಸರು ಸಹ.	ದಸ್ತಾವೇಜನ್ನು ಬರಿಸಿ ಕೊಟ್ಟವರ ಹೆಸರು ಮತ್ತು ಅಡ್ಡ ಹೆಸರು ವಗೈರೆ.	ದಸ್ತಾವೇಜಿನ ತಾರೀಖು.	ದಸ್ತಾವೇಜು ರಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1ನೇ ಬುಕ್ಕು 192 1886—87	ತೀರ್ಥಹಳ್ಳಿ.	ಗಾನಪ್ಪ ಕೊಲ್ಲೂರು ತಿಮ್ಮಪ್ಪನ ಮಗ ತೀರ್ಥಹಳ್ಳಿ ವಾಸಸ್ಥ.	ಮಂಜಪ್ಪ ಜವಳಿ ಸುಬ್ಬಾಯರ ಮಗ ತೀರ್ಥಹಳ್ಳಿ	15—12—86	15—12—86	ತೀರ್ಥಹಳ್ಳಿ ಕಸಬಾದಲ್ಲಿರುವ ಶಿವಮೊಗ್ಗೆಯಿಂದ ಆಗುಂಬೆಗೆ ಹೋಗುವ ರಸ್ತೆ ಎಡಬಾಜೂದಲ್ಲಿನ್ನ ಅಂಗಡಿ ಬಲದಿಕ್ಕಿಗೆ ಇರುವ ಸ್ಥಳ 1ಕ್ಕೆ ಅಳತೆ ದಕ್ಷಿಣ ಪುತ್ತರ ಗಜ 5, ಪೂರ್ವ ಪಶ್ಚಿಮ ಗಜ 9 ಈ ಮೇರಿಗೆ ಇರುವ ಸ್ಥಳಕ್ಕೆ 10 ರೂಪಾಯಿಗೆ ಕ್ರಯ.
ಡಿಟೋ 124 1886—87	ಶಿವಮೊಗ್ಗೆ.	ಹೊನ್ನಾಳಿ ಮುನಸಿಫ್ ಕೋರ್ಟು ತೀರ್ಥಹಳ್ಳಿ ಮುನಸಿಫ್ ರಾಮಸ್ವಾಮಯ್ಯಂಗಾರ್.	ಅಕ್ಬರ್‌ಖಾ	3—3—86	13—3—86	ಕಸಬಾ ಶಿಕಾರಿಪುರದಲ್ಲಿ ಪೂರ್ವಕ್ಕೆ ಹುಸೇಖಾನನ ಮನೆ, ಪಶ್ಚಿಮಕ್ಕೆ ಅಗಸರ ಮೊಹದ್ದಿಸಾಬನ ಮನೆ, ಉತ್ತರಕ್ಕೆ ಅಗಸರ ಮುಮ್ಮಿಸಾಬನ ಮನೆ, ದಕ್ಷಿಣಕ್ಕೆ ಜನಗಳು ತಿರುಗುವ ರಸ್ತೆ ಈ ಮಧ್ಯೆ ಇರುವ ಪ್ರತಿವಾದಿ ಗಂಡ ಫಾತಿ ಅಲಾತ್‌ಖಾ ಬಾಬತು ನಂಬರ 303ನೇ ಮೇಲ್‌ಮಹಡಿ ಮನೆ 102 ರೂಪಾಯಿಗೆ ಕೋರ್ಟು ಶೇಲ್ ಸರಟ ಫಿಕೇಟ್.

ಕಾ. ನಾಗೇಶರಾವ್, ಛಾರ್ ರೆಜಿಸ್ಟ್ರಾರ್.

ಹಾಸನ ಡಿಸ್ಟ್ರಿಕ್ಟು.

ನೊಟಿಫಿಕೇಷನ್.

10ನೇ ಡಿಸೆಂಬರ್ 1889ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸರ್ಕಾರದವರ ಅಪ್ಪಣೆ ಅನುಸರಿಸಿ ಹಾಸನ ಡಿಸ್ಟ್ರಿಕ್ಟು ಬಾಬತು ಅನುಪಯೋಗವಾದ ರೆವಿನ್ಯೂ ರಿಕಾರ್ಡುಗಳು ನಾಶ ಪಡಿಸಲ್ಪಡುವವು.

ದಸ್ತೈವಜುಗಳು ದಾಖಲಾತುಗಳು ವಗೈರೆ ಪಡಿಯಲೂ ಅಪೇಕ್ಷೆವುಳ್ಳ ಕಕ್ಷಿಗಾರ್ರು ಈ ತಾರೀಖು ಲಾಗಾಯತು ಮೂರು ತಿಂಗಳ ವಳಗಾಗಿ ನಮ್ಮನ್ನ ಕೇಳಿ ಕೊಳ್ಳಬಹುದು.

4ನೇ ಜನವರೀ 1890ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—

ಸರ್ಕಾರದ ಅಪ್ಪಣೆ ಅನುಸರಿಸಿ ಕೆಳಗೆ ನಮೂದು ಮಾಡುವ ಈ ಡಿಸ್ಟ್ರಿಕ್ಟುಗಳ ಅನುಪಯೋಗವಾದ ರೆವಿನ್ಯೂ ರಿಕಾರ್ಡುಗಳು ನಾಶಪಡಿಸಲ್ಪಡುವವು.

ದಸ್ತೈವಜುಗಳು ದಾಖಲಾತುಗಳು ವಗೈರೆ ಪಡಿಯಲು ಅಪೇಕ್ಷೆವುಳ್ಳ ಕಕ್ಷಿಗಾರ್ರು ಈ ತಾರೀಖುಲಾಗಾಯಿತು 3 ತಿಂಗಳ ವೊಳಗಾಗಿ ಆಯಾಯ ತಾಲ್ಲೂಕು ಅಮಲ್ದಾರಗಳಲ್ಲಿ ಕೇಳಿ ಕೊಳ್ಳಬಹುದು.

1 ಹಾಸನ
2 ಮಂಜ್ರಾಬಾದು
3 ಹೊಳೇನರಸೀಪುರ
4 ಬೇಲೂರು
5 ಅರಸೀಕೆರೆ
6 ಅರಕಲ್‌ಗೂಡು
7 ಚೆನ್ನರಾಯಪಟ್ಟಣ

ಪಿ. ಯ್. ಪೂರ್ಣಯ್ಯ,
ಡೆಪ್ಯೂಟಿ ಕಮ್ಮಿಷನರ್.